# ತಾಲಿಬಾನ್ ಜಾಗತಿಕ ಆತಂಕ

## ಕಬಂಧ ಬಾಹುಗಳು ಜಗತ್ತಿನಾದ್ಯಂತ ನಾನಾ ರೂಪದಲ್ಲಿವೆ



ಪ್ರಸ್ತುತ
ಮದನ್ ಗೋಪಾಲ್

ಕಳೆದ ಕೆಲವು ದಿನಗಳಿಂದ, ಕಾಬೂಲ್ ವಿಮಾನ ನಿಲ್ದಾಣದ ಮೂಲಕ ದೇಶ ಬಿಟ್ಟು ಹೋಗುತ್ತಿರುವವರನ್ನು ನೋಡಿದರೆ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ತಾಲಿಬಾನ್ ಬಂದೂಕುಧಾರಿಗಳು ಕಾಬೂಲ್ ನಗರದ ಬೀದಿ ಬೀದಿಗಳಲ್ಲಿ ತಮ್ಮ ಮಾರಕ ಆಯುಧಗಳೊಂದಿಗೆ ಗಸ್ತು ತಿರುಗುತ್ತಿರುವ ವಿಡಿಯೋಗಳು ಮಾಧ್ಯಮದಲ್ಲಿ ಬಿತ್ತರವಾಗುತ್ತಿವೆ. ಜೊತೆಗೆ, ಮಾಧ್ಯಮಗಳಲ್ಲಿ ನಡೆಯುತ್ತಿರುವ ರಾಜಕೀಯ ವಿಶ್ಲೇಷಣೆಗಳು ಮತ್ತು ಚರ್ಚೆಗಳು ಆ ದೇಶದ ಅನಿಶ್ಚಿತ ಭವಿಷ್ಯವನ್ನು ಸೂಚಿಸುತ್ತಿವೆ. ಮತೀಯ ಮೂಲಭೂತವಾದ ಯಾವ ಮಟ್ಟಕ್ಕೆ ಒಂದು ದೇಶವನ್ನು ಕೊಂಡೊಯ್ಯಬಹುದು ಎಂಬ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ.

1990ರ ದಶಕದಲ್ಲಿ ಪೀಟರ್ ಹಾಪ್‌ಕ್ರಿಕ್ ಅವರು ಪ್ರಕಟಿಸಿದ್ದ 'ಗ್ರೇಟ್ ಗೇಮ್: ಆನ್ ಸೀಕ್ರೆಟ್ ಸರ್ವೀಸ್ ಇನ್ ಹೈ ಏಷ್ಯಾ' ಎಂಬ ಪುಸ್ತಕವನ್ನು ಓದಿದವರು, ಆಗಿನ ಸಾಮ್ರಾಜ್ಯಶಾಹಿ ಶಕ್ತಿಗಳು, ರಷ್ಯಾದ ಸಾಮ್ರಾಜ್ಯ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳು ಹೇಗೆ ಮಧ್ಯ ಏಷ್ಯಾದ ಮೇಲೆ ನಿಯಂತ್ರಣವನ್ನು ಹೊಂದುವ ಸಲುವಾಗಿ ಸಂಚನ್ನು ರೂಪಿಸಿದ್ದವು ಎಂಬುದನ್ನು ಅರ್ಥ ಮಾಡಿಕೊಂಡಿರುತ್ತಾರೆ. ಅದರಲ್ಲೂ ವಿಶೇಷವಾಗಿ ಅಫಘಾನಿಸ್ತಾನದ ಮೇಲೆ ಪ್ರಾಬಲ್ಯ ಸಾಧಿಸುವ ಮೂಲಕ, ಇಡೀ ಏಷ್ಯಾದಲ್ಲಿ ಅಧಿಕಾರ ವಿಸ್ತರಿಸಲು ಸಾಧ್ಯ ಎಂಬುದನ್ನು ಅರಿತಿದ್ದರು. ಅದೇ ರೀತಿ ಭಾರತದಲ್ಲಿ ಎಂಟನೇ ಶತಮಾನದಿಂದ ಮೊಘಲ್ ಸಾಮ್ರಾಜ್ಯ ಪತನವಾಗುವವರೆಗೆ ಕ್ರೂರ ಇಸ್ಲಾಮಿಕ್ ಆಕ್ರಮಣಕಾರರು ಅಫಘಾನಿಸ್ತಾನದೊಂದಿಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಗಳನ್ನು ಹೊಂದಿರುವುದು ನಮಗೆಲ್ಲ ತಿಳಿದ ವಿಚಾರವೇ. ವಿಕೃತಿ ಮತ್ತು ನಿರ್ದಯತೆಗೆ ಹೆಸರುವಾಸಿಯಾಗಿದ್ದ ಬಾಬರ್ 1504 ರಲ್ಲಿ ಕಾಬೂಲನ್ನು ವಶಪಡಿಸಿಕೊಂಡಿದ್ದಲ್ಲದೇ, ಮುಂದಿನ ಶತಮಾನಗಳ ಕಾಲದ ದಬ್ಬಾಳಿಕೆಗೆ ಅಡಿಪಾಯ ಹಾಕಿ ಹೋಗಿದ್ದ. ಅವನ ಮರಣಾನಂತರ ಅವನ ಇಚ್ಛೆಯಂತೆ ಬಾಬರನ ದೇಹವನ್ನು ಕಾಬೂಲ್‌ಗೆ ಕೊಂಡೊಯ್ದು ಅಲ್ಲಿನ ಬೆಟ್ಟದ ಪಕ್ಕದಲ್ಲಿ ಹೂಳಲಾಯಿತು. ಹೀಗೆ ಅಫಘಾನಿಸ್ತಾನ ಮತ್ತು ಭಾರತದ ನಡುವೆ ಗಾಢವಾದ ಸಂಬಂಧ ಹೊಸೆದುಕೊಂಡಿದೆ.

1996ರಲ್ಲಿ ತಾಲಿಬಾನಿಗಳು ಅಲ್ಲಿನ ಮಹಿಳೆಯರು, ಅಮಾಯಕರು, ಸಿಖ್ಖರು, ಹಿಂದೂಗಳು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಅಮಾನವೀಯವಾಗಿ ಹೇರಿದ ನಿರ್ಬಂಧಗಳು ನಿಜಕ್ಕೂ ಅತ್ಯಂತ ಹೇಯಕರವಾಗಿದ್ದವು. ಬಾಮಿಯಾನ್‌ನಲ್ಲಿ ಬುದ್ಧನ ಅತಿ ಎತ್ತರದ ಮೂರ್ತಿಗಳನ್ನು ನಾಶ ಮಾಡುವ ಮೂಲಕ ಅಲ್ಲಿನ ಪುರಾತನ ಪರಂಪರೆಯನ್ನು ಅಳಿಸಿ ಹಾಕುವ ಪ್ರಯತ್ನ ಅಂದು ಪ್ರಜ್ಞಾಪೂರ್ವಕವಾಗಿ ನಡೆದ ವಿಧ್ವಂಸಕ ಮತ್ತು ದುರಾಚಾರ ಇಂದಿಗೂ ಇತಿಹಾಸದಲ್ಲಿ ಅಚ್ಚಳಿಯದೆ ಸಂಗತಿಯಾಗಿದೆ.

1990ರ ತಾಲಿಬಾನ್ ಮತ್ತು ಈಗಿನ ತಾಲಿಬಾನ್‌ಗೆ ಅನೇಕ ವಿಷಯಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಅವರು ಈಗ ಮತ್ತಷ್ಟು ಬಲಶಾಲಿಗಳಾಗಿದ್ದಾರೆ. ದೊಡ್ಡ ಮಟ್ಟದ ಆರ್ಥಿಕ ಸಂಪನ್ಮೂಲಗಳಿವೆ, ಹಿಂಸಾಕೃತ್ಯಗಳಲ್ಲಿ ಎರಡು ದಶಕಗಳ ಕಾಲದ ಅನುಭವವಿದೆ. ಹಾಗಾಗಿ ಪ್ರಪಂಚದ ಉಳಿದ ಪ್ರಜಾಪ್ರಭುತ್ವ ರಾಷ್ಟ್ರಗಳು ಇದು ನಮ್ಮ ಸಮಸ್ಯೆಯಲ್ಲ ಎಂದು ಸುಮ್ಮನೇ ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ, ಈ ಭಯೋತ್ಪಾದಕ ಸಂಘಟನೆ ಪ್ರಪಂಚದ ಮಗ್ಗುಲ ಮುಳ್ಳಾಗಿ ಕಾಡುವುದಂತೂ ಸತ್ಯ. ಅಫಘಾನಿಸ್ತಾನವನ್ನು ವಶಪಡಿಸಿಕೊಂಡ ಬಳಿಕ ತಾಲಿಬಾನಿನ ವಕ್ತಾರ ಜಬಿಹುಲ್ಲಾ ಮುಜಾಹಿದ್ ತನ್ನ ಮೊದಲ ಪತ್ರಿಕಾಗೋಷ್ಠಿಯಲ್ಲಿ ತಾವು ಮೊದಲಿನಂತೆ ಇರದೇ ಬಹಳಷ್ಟು ಬದಲಾಗಿದ್ದೇವೆ, ಮಹಿಳೆಯರ ಹಕ್ಕುಗಳನ್ನು ಗೌರವಿಸುತ್ತೇವೆ, ಹಿಂದಿನ ಸರಕಾರದ ಪರವಾಗಿ ಕೆಲಸ ಮಾಡಿದವರನ್ನು ಕ್ಷಮಿಸುತ್ತೇವೆ, ಮಾಧ್ಯಮಗಳಿಗೆ ಸ್ವಾತಂತ್ರ್ಯವನ್ನು ಕೊಡುತ್ತೇವೆ, ನಮ್ಮ ದೇಶ ಭಯೋತ್ಪಾದನಾ ಚಟುವಟಿಕೆಗಳಿಗೆ ತಾಣವಾಗಲು ಬಿಡುವುದಿಲ್ಲ ಎಂದೆಲ್ಲ ಆಶ್ವಾಸನೆಗಳನ್ನು ಕೊಟ್ಟಿದ್ದಾನೆ. ಅದು ತಮ್ಮ ಮೇಲಿನ ಜಗತ್ತಿನ ದೃಷ್ಟಿಕೋನ ಬದಲಾಗಲಿ ಎಂಬ ಬುದ್ಧಿವಂತ ನಡೆಯಾಗಿತ್ತೇ ಹೊರತು ಅವರಲ್ಲಿ ಯಾವುದೇ ಬದಲಾವಣೆಯನ್ನು ನಿರೀಕ್ಷಿಸಲಾಗದು. ಇದನ್ನು ಪುಷ್ಟೀಕರಿಸುವಂತೆ, ಸುದ್ದಿಗೋಷ್ಠಿಯ ನಂತರದ ಘಟನೆಗಳು, ಅಲ್ಲಿನ ಬೀದಿಗಳಲ್ಲಿ ಜನರನ್ನು ಅನವಶ್ಯಕವಾಗಿ ಹಿಂಸಿಸುತ್ತಿರುವುದು, ಮನೆಗಳ ಮೇಲೆ ಏಕಾಏಕಿ ದಾಳಿ ನಡೆಸುತ್ತಿರುವುದು, ಹಿಂದಿನ ಸರಕಾರದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಮಹಿಳಾ ಪತ್ರಕರ್ತರನ್ನು ಕೆಲಸದಿಂದ ತೆಗೆದಿರುವುದಲ್ಲದೇ ಅಂತಹವರನ್ನು ಹುಡುಕಿ ಹುಡುಕಿ ಶಿಕ್ಷೆ ಕೊಡುತ್ತಿರುವುದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಕ್ಕೂ ಅಲ್ಲಿ ನಡೆಯುತ್ತಿರುವುದಕ್ಕೂ ಅಜಗಜಾಂತರ ಇದೆ ಎನ್ನುವುದನ್ನು ಸಾರಿ ಹೇಳುತ್ತಿವೆ. ಇದಲ್ಲದೇ, ಅವರು ಜಾರಿ ಮಾಡಲು ಹೊರಟಿರುವ ಕಠಿಣ ಇಸ್ಲಾಮಿಕ್ ಕಾನೂನುಗಳು ಜನಸಾಮಾನ್ಯರ ಮೇಲೆ ಹೇರುವ ನಿಯಂತ್ರಣ, ಅದರಲ್ಲೂ ನಿರ್ದಿಷ್ಟವಾಗಿ ಮಹಿಳೆಯರು ಮತ್ತು ಸ್ಥಳೀಯ ಸಂಸ್ಕೃತಿ, ಆಚರಣೆಗಳು, ಸಂಪ್ರದಾಯಗಳ ಮೇಲೆ ನಿಷ್ಠುರವಾದ ಇಸ್ಲಾಮಿಕ್ ಕಾನೂನನ್ನು ತಾಲಿಬಾನ್ ಸರಕಾರ ಅಳವಡಿಸಿಕೊಳ್ಳಲಿದೆ ಎಂದಿರುವುದು ಎಲ್ಲರಲ್ಲೂ ಭಯ ಸೃಷ್ಟಿಸಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಮಹತ್ವದ ಅಂಶವೆಂದರೆ ತಾಲಿಬಾನ್ ಎಂಬುದು ಜಾಗತಿಕ ಜಿಹಾದಿ ಚಳವಳಿಯ ಭಾಗವೇ ಆಗಿದೆ. ತಾಲಿಬಾನ್, ಅಲ್ ಕೈದಾ, ಐಸಿಸ್, ಬೊಕೊ ಹರಾಮ್, ಹಕ್ಕಾನಿ ನೆಟ್ ವರ್ಕ್, ಜೈಶ್ ಮೊಹಮ್ಮದ್, ಲಷ್ಕರ್ ತಯ್ಬಾ ಮತ್ತು ಇತರ ಭಯೋತ್ಪಾದಕ ಸಂಘಟನೆಗಳ ಹೆಸರು ಬೇರೆಬೇರೆಯಾಗಿದ್ದರೂ, ಅವರ ಮಹತ್ವಾಕಾಂಕ್ಷೆಗಳು ಒಂದೇ ಆಗಿದೆ. ಅಲ್ ಕೈದಾ ಈಗಾಗಲೇ ತಾನು ತಾಲಿಬಾನ್‌ಗೆ ಅಧೀನ ಎಂದು ಘೋಷಿಸಿಕೊಂಡಿರುವುದಲ್ಲದೆ, ಮುಲ್ಲಾ ಒಮರ್‌ನನ್ನು ತಮ್ಮ ನಾಯಕನೆಂದು ಒಪ್ಪಿಕೊಂಡಿದೆ. ಅಂತೆಯೇ, ಅಲ್ ಕೈದಾದ ಪ್ರಮುಖ ಧರ್ಮಗುರುಗಳಲ್ಲಿ ಒಬ್ಬನಾದ ಮೊಹಸೀನ್ ಹಟೀಮ್ ಐಸಿಸ್‌ಗೆ ಬೆಂಬಲ



ನೀಡುವುದಿಲ್ಲ ಎಂದು ಘೋಷಿಸಿದ್ದರೂ, ಭಯೋತ್ಪಾದನಾ ಚಟುವಟಿಕೆಗಳಲ್ಲಿ ಈ ಎಲ್ಲಾ ಗುಂಪುಗಳ ನಡುವೆ ಪರಸ್ಪರ ಒಳಒಪ್ಪಂದವಾಗಿದೆ ಎಂಬುದು ಈಗ ಎಲ್ಲರಿಗೂ ತಿಳಿದ ಬಹಿರಂಗ ರಹಸ್ಯವಾಗಿದೆ. ಈ ಎಲ್ಲಾ ಧಾರ್ಮಿಕ ಸಂಘಟನೆಗಳು, ರಾಜಕೀಯ ಸಂಘಟನೆಗಳು, ಪ್ರಪಂಚದಾದ್ಯಂತ ನಾಯಿಕೊಡೆಯಂತೆ ಹರಡಿಕೊಂಡಿರುವುದಲ್ಲದೆ ಅಲ್ಲಿ ತಮ್ಮ ಜಿಹಾದಿ ಸಿದ್ಧಾಂತದ ಮೂಲಕ ಇಸ್ಲಾಮಿಕ್ ಸಾಮ್ರಾಜ್ಯವನ್ನು ಸ್ಥಾಪಿಸುವ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಗುರಿಯನ್ನು ಹೊಂದಿವೆ. ಅಮೆರಿಕಕ್ಕೆ ನೀಡಿದ್ದ ಭರವಸೆಯನ್ನು ಮೀರಿ, ತಾಲಿಬಾನ್ ಈಗಾಗಲೇ ತನ್ನದು ಇಸ್ಲಾಮಿಕ್ ದೇಶ ಎಂದು ಘೋಷಿಸಿಕೊಂಡಿದೆ. ಶತ್ರುವಿನ ಶತ್ರು ತಮ್ಮ ಮಿತ್ರ ಎಂಬ ಮಾತಿನಂತೆ, ಭಾರತದಲ್ಲಿನ ಎಡಪಂಥೀಯ ಉದಾರವಾದಿಗಳು ಎಂದು ಕರೆದುಕೊಳ್ಳುವ, ಸ್ವಘೋಷಿತ ಬುದ್ಧಿಜೀವಿಗಳು ಹಾಗೂ ಕೆಲವು ನಿರುದ್ಯೋಗಿ ರಾಜಕಾರಣಿಗಳು ಈ ನಡೆಯನ್ನು ಸ್ವಾಗತಿಸಿರುವುದು ರಾಷ್ಟ್ರೀಯ ಭದ್ರತೆ ಮತ್ತು ಸಮಗ್ರತೆಯ ದೃಷ್ಟಿಯಿಂದ ಆತಂಕಕಾರಿ.

ಇದನ್ನು ಗಮನಿಸಿದರೆ, ಇವರೆಲ್ಲರ ರಾಜಕೀಯ ಚಟುವಟಿಕೆ ಮತ್ತು ಹೋರಾಟಗಳನ್ನು ಇನ್ನು ಮುಂದೆ ಕೇವಲ ಸಾಮಾನ್ಯ ರೀತಿಯ ಹೋರಾಟ ಎಂದು ಭಾವಿಸದೆ, ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳ ಬೆಂಬಲಿತ ಹೋರಾಟ ಎಂದೇ ಪರಿಗಣಿಸಬೇಕಾಗುತ್ತದೆ. ಇವರೆಲ್ಲರ ಆಟಾಟೋಪಗಳು ಜಾಗತಿಕ ಜಿಹಾದಿ ಚಳವಳಿಯ ಅಂಗವಾಗಿದ್ದು ಪ್ರಪಂಚದಾದ್ಯಂತ ಹರಡಿಕೊಂಡಿರುವ ಭಯೋತ್ಪಾದನೆಯ ಸಂಘಟಿತ ಕೃತ್ಯಗಳ ಭಾಗವಾಗಿದೆ ಎಂಬುದಕ್ಕೆ ಸ್ಪಷ್ಟ ಪುರಾವೆ. ಈ ಎಲ್ಲಾ ಭಯೋತ್ಪಾದಕ ಗುಂಪುಗಳು ಒಂದಕ್ಕೊಂದು ಸಂಬಂಧ ಹೊಂದಿದ್ದು ಭಯೋತ್ಪಾದನಾ ಚಟುವಟಿಕೆಗಳಿಗೆ ಮತ್ತು ಕೋಮುಸಂಘರ್ಷ ಸೃಷ್ಟಿಸಲು ಪರಸ್ಪರ ಬೆಂಬಲಿಸುತ್ತಿವೆ. ಈ ಉಗ್ರಸಂಘಟನೆಗಳ ನಿಜಸ್ವರೂಪವನ್ನು ಇಡೀ ಜಗತ್ತು ಬೇಗ ತಿಳಿದಷ್ಟು ಒಳ್ಳೆಯದು. ಎಲ್ಲಾ ರಾಷ್ಟ್ರಗಳು ಒಂದಾಗಿ ಈ ಸಂಘಟನೆಗಳ ವಿರುದ್ಧ ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ಸ್ಪಷ್ಟವಾದ ಕಾರ್ಯತಂತ್ರದೊಂದಿಗೆ ಹೋರಾಡಿದರೆ ಮಾತ್ರ ಶಾಶ್ವತವಾದ ಪರಿಹಾರವನ್ನು ಕಂಡುಕೊಂಡು ವಿಶ್ವ ಶಾಂತಿ ಕಾಪಾಡಲು ಸಾಧ್ಯವಾದೀತು.

(ಲೇಖಕರು ನಿವೃತ್ತ ಐಎಎಸ್ ಅಧಿಕಾರಿ)